# ಹೊಸತು




## ಓಲ್ಡ್ ಸ್ಪೈಸ್ ಡಿಯೊಡರೆಂಟ್

ಪುರುಷರ ಡಿಯೋಡರೆಂಟ್ ಬ್ರಾಂಡ್ ಆಗಿರುವ ಓಲ್ಡ್ ಸ್ಪೈಸ್ ಮೂರು ಹೊಸ ಉತ್ಪನ್ನಗಳನ್ನು ಪರಿಚಯಿಸಿದೆ. ಸ್ಪೋಟರ್, ಮ್ಯಾಗ್ನೆಟ್ ಮತ್ತು ಫ್ರೆಷ್ ಹೆಸರಿನ ಈ ಮೂರು ಹೊಸ ಓಲ್ಡ್ ಸ್ಪೈಸ್ ಡಿಯೊಡರೆಂಟ್‌ಗಳು ಸುವಾಸನೆಯನ್ನು ಇನ್ನಷ್ಟು ತೀವ್ರಗೊಳಿಸಲಿದೆ.

ಒಂದೊಂದು ಭಿನ್ನ ಮನೋಭಾವಕ್ಕೆ ಹೊಂದಿಕೆಯಾಗುವಂತೆ ಆರು ಬಗೆಯ ಓಲ್ಡ್ ಸ್ಪೈಸ್ ಡಿಯೋಡರೆಂಟ್‌ಗಳು ಮಾರುಕಟ್ಟೆಯಲ್ಲಿ ಈಗ ಲಭ್ಯ ಎಂದು ಉತ್ಪಾದಕ ಕಂಪೆನಿ ಪ್ರಾಕ್ಟರ್ ಆಂಡ್ ಗ್ಯಾಂಬಲ್ ಹೇಳಿದೆ. ಓಲ್ಡ್ ಸ್ಪೈಸ್ ಒರಿಜಿನಲ್, ಮಸ್ಕ್, ಫ್ರೆಷ್ ಲೈಮ್ ಮತ್ತು ವೈಟ್ ವಾಟರ್ ಉತ್ಪನ್ನಗಳು ಈಗಾಗಲೇ ಲಭ್ಯವಿವೆ.

ಎಲ್ಲ ಮಳಿಗೆಗಳಲ್ಲಿಯೂ ಲಭ್ಯವಿದೆ. 150 ಎಂಎಲ್ ಕ್ಯಾನ್ ಬೆಲೆ ರೂ. 180.

ಮಾಹಿತಿಗೆ: 7738344000




## ಕಾರಾ ಬೇಬಿ ವೈಪ್ಸ್

ಕಾರಾ ಕಂಪೆನಿ ವಿನೂತನ ಮಾದರಿಯ ಬೇಬಿ ಕೇರ್ ವೈಪ್ಸ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಮಗುವಿಗೆ ಸಂಪೂರ್ಣ ನೈಸರ್ಗಿಕ ಆರೈಕೆಯನ್ನು ಮಾಡುತ್ತದೆ. ಇದನ್ನು ಬಯೋಡಿಗ್ರೆಡೆಬಲ್ ಫೈಬರ್ ಮತ್ತು ಬಿರ್ಲಾ ಸೆಲ್ಯುಲೋಸ್‌ನಿಂದ ತಯಾರಿಸಲಾಗಿದ್ದು, ಮಗುವಿನ ತ್ವಚೆಗೆ ಮೃದುವಾಗಿ ಸ್ಪಂದಿಸುತ್ತದೆ. ಸ್ವಚ್ಛತೆ, ಆರ್ದ್ರತೆ, ಪೋಷಣೆ, ಸೋಂಕು ನಿವಾರಣೆ ಮತ್ತು ಸುಗಂಧ.. ಈ ಐದು ಹಂತಗಳಲ್ಲಿ ಮಗುವಿನ ಪೋಷಣೆ ಮಾಡುತ್ತದೆ. 20 ವೈಪ್‌ಗಳಿರುವ ಪ್ಯಾಕೆಟ್ ಗೆ 40 ರೂಪಾಯಿ.

ಮಾಹಿತಿಗೆ: 9738007723




## ಪೋರ್ಟೆಬಲ್ ಸ್ಪೀಕರ್

ಪೋರ್ಟ್‌ಟ್ರಾನಿಕ್ಸ್ ಇಂಡಿಯಾ ಕಂಪೆನಿ ಇದೀಗ ಹೊಸ ಮಾದರಿಯ ಪೋರ್ಟೆಬಲ್ ಸ್ಪೀಕರ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಡಿಸ್ನಿ ಇಂಡಿಯಾ ಕಂಪೆನಿಯಿಂದ ಪ್ರೇರಿತವಾದ ಈ ಕಂಪೆನಿ ಮಕ್ಕಳಿಗೂ ಅಗತ್ಯವಿರುವ ಕೆಲವು ಉತ್ಪನ್ನಗಳನ್ನು ಹೊರತಂದಿದೆ. ಇದರಲ್ಲಿ ಐರನ್ ಮ್ಯಾನ್, ಕ್ಯಾಪ್ಟನ್ ಅಮೆರಿಕ ಮುಂತಾದ ಕ್ಯಾರೆಕ್ಟರ್‌ಗಳಿದ್ದು ಮಕ್ಕಳಿಗೆ ಇಷ್ಟವಾಗುವಂತಿದೆ. ಹಾಡುಗಳನ್ನು ಕೇಳಬಹುದು, ವಿಡಿಯೊ ಗೇಮ್ ಕೂಡ ಆಡಬಹುದು. ಬೆಲೆ 1399 ರೂಪಾಯಿ.



## ಆ್ಯರೊದಿಂದ ಆಕರ್ಷಕ ಉಡುಪು

ವೈವಿಧ್ಯಮಯ ಫ್ಯಾಷನೆಬಲ್ ಉಡುಗೆಗಳಿಗೆ ಹೆಸರಾದ ಬ್ರ್ಯಾಂಡೆಡ್ ಕಂಪೆನಿ ಆ್ಯರೊ ಇದೀಗ ಪ್ಯಾಂಟ್, ಶರ್ಟ್, ಜಾಕೆಟ್, ಟಾಪ್ ಮೊದಲಾದ ಹಲವು ಬಗೆಯ ಉಡುಗೆಗಳನ್ನು ಬಿಡುಗಡೆ ಮಾಡಿದೆ. ಬೆಲೆ 1999ರಿಂದ 5999 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ.

## ಎಚ್‌ಡಿಎಂಐ ಮೀಡಿಯ ಸ್ಟ್ರೀಮಿಂಗ್ ಡಾಂಗಲ್

ಬೆಂಗಳೂರು ಮೂಲದ ಮ್ಯಾಂಗೊ ಮ್ಯಾನ್ ಕನ್ಸ್ಯೂಮರ್ ಎಲೆಕ್ಟ್ರಾನಿಕ್ಸ್ ಸಂಸ್ಥೆ ಇದೀಗ ಟಿ.ವಿ.ಗೆ ಅಳವಡಿಸುವ ಎಚ್‌ಡಿಎಂಐ ಮೀಡಿಯ ಸ್ಟ್ರೀಮಿಂಗ್ ಡಾಂಗಲ್ ಒಂದನ್ನು ಬಿಡುಗಡೆ ಮಾಡಿದೆ. ಹೆಚ್‌ಡಿಎಂಐ ಮೀಡಿಯ ಸ್ಟ್ರೀಮಿಂಗ್ ಡಾಂಗಲ್ ಒಂದು ಸ್ಮಾರ್ಟ್ ಉಪಕರಣವಾಗಿದ್ದು, ಹೆಚ್‌ಡಿಎಂಐ ಪೋರ್ಟ್ ಮೂಲಕ ಟೆಲಿವಿಷನ್‌ಗೆ ಸಂಪರ್ಕ ಕಲ್ಪಿಸುತ್ತದೆ. ಈ ಮೂಲಕ ಬಳಕೆದಾರರು ತಮ್ಮ ಟಿವಿಯಲ್ಲಿ ವೈರ್‌ಲೆಸ್ ಮೂಲಕ ಇಂಟರ್‌ನೆಟ್ ಹುಡುಕಾಟ ಮತ್ತು ವಿಸ್ತಾರವಾದ ವಿಷಯಗಳನ್ನು (ಕಂಟೆಂಟ್) ನೋಡಬಹುದು. ಯೂಟ್ಯೂಬ್ ಬಳಕೆಯಲ್ಲದೆ ಗ್ರಾಹಕರು ತಮ್ಮ ಲ್ಯಾಪ್‌ಟಾಪ್‌ಗಳ ಮೂಲಕ ಡೌನ್‌ಲೋಡ್ ಮಾಡಿಕೊಂಡ ವಿಷಯಗಳು ಮತ್ತು ಇತರೆ ಸ್ಟೋರೇಜ್ ಉಪಕರಣಗಳಲ್ಲಿ ಸ್ಟೋರ್ ಮಾಡಿಕೊಂಡಿರುವ ವಿಷಯಗಳನ್ನು ಟೀವಿಯಲ್ಲಿ ನೋಡಬಹುದು. ಈ ಹೊಸ ಸಾಧನ ಟೀವಿ, ಸ್ಮಾರ್ಟ್‌ಫೋನ್ ಆ್ಯಪ್ (ಗೂಗಲ್ ಪ್ಲೇ ಹಾಗೂ ಆ್ಯಪಲ್ ಆ್ಯಪ್ ಸ್ಟೋರ್) ನೊಂದಿಗೆ ದೊರೆಯುತ್ತದೆ. ಇದು ರಿಮೋಟ್ ಕಂಟ್ರೋಲ್ ರೀತಿ ಹಾಗೂ ಯೂಸರ್ ಇಂಟರ್‌ಫೇಸ್ ರೀತಿಯಲ್ಲಿಯೂ ಕಾರ್ಯನಿರ್ವಹಿಸುತ್ತದೆ. ಸದ್ಯ ಈ ಉಪಕರಣ ಮುಂಚಿತವಾಗಿಯೇ ಲೋಡ್ ಮಾಡಲಾಗಿರುವ ಯೂಟ್ಯೂಬ್ ಸಂಗ್ರಹ, ಸ್ಥಳೀಯ ವಿಷಯ ಮತ್ತು ವೆಬ್‌ನಿಂದ ಪಡೆದುಕೊಂಡಿರುವ ಇತರೆ ವಿಷಯ ಸಂಗ್ರಹಗಳೊಂದಿಗೆ ಲಭ್ಯವಿದೆ.

ಮಾಹಿತಿಗೆ: www.snapdeal.com

